
# ಪರಿವರ್ತನೆ

ಸ್ವಾಮಿ ಸುನಿರ್ಮಲಾನಂದ



ಕಲೆ :ರಾಮಗೌತಮ

ಶಾಂತಿಯೇ ಮೈತಳೆದಂತಿದ್ದ ಬುದ್ಧನ ಸಾನ್ನಿಧ್ಯ ಎಂಥ ದುಃಖಿತ ಹೃದಯಕ್ಕೂ ಶಾಂತಿಯನ್ನು ನೀಡಬಲ್ಲದು. ಎಂಥ ಕಲ್ಲು ಹೃದಯವನ್ನೂ ಕರಗಿಸಬಲ್ಲ ಕರುಣ ಕಥೆ ಇದು. ಸ್ವಾಮಿ ಸುನಿರ್ಮಲಾನಂದರು 'ಪ್ರಬುದ್ಧ ಭಾರತ' ಎಂಬ ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆಯ ಸಂಪಾದಕರು.

## ೧

'ಭಗಿನಿಯರೇ, ನಾನು ಬುದ್ಧದೇವರಿಗೆ, ಧರ್ಮಕ್ಕೆ ಮತ್ತು ಸಂಘಕ್ಕೆ ಶರಣಾಗುತ್ತೇನೆ' ಎಂದು ಪ್ರಾರಂಭಿಸಿದಳು. ಆದರೆ ಒಂದು ಕ್ಷಣ ಮಾತು ನಿಂತು ಹೋಯಿತು. ಅವಳ ಜೀವನ ಸಂಗ್ರಾಮ ಬಹಳ ಹಿಂದೆಯೇ ಮುಗಿದು ಹೋಗಿತ್ತು. ಆದರೂ.... 'ಭಗಿನಿಯರೇ, ಮನುಷ್ಯರು ಎಲ್ಲಿಂದ ಬರುತ್ತಾರೆ ಎಂದು ಯಾರಿಗಾದರೂ ಗೊತ್ತೇ? ಎಲ್ಲಿ ಹೋಗುತ್ತಾರೆ ಎಂದು ಯಾರಿಗಾದರೂ ಗೊತ್ತೇ? ಈ ರೀತಿ ಯಾರಾದರೂ ಬಂದರೆ ಆತನನ್ನು ಏಕೆ ಪತಿಯೆಂದೋ ಪುತ್ರನೆಂದೋ ಸಂಬೋಧಿಸಬೇಕು? ಅಥವಾ ಆಕೆಯನ್ನು ಪತ್ನಿಯೆಂದೋ ಪುತ್ರಿಯೆಂದೋ ಸಂಬೋಧಿಸಬೇಕು? ಮನುಷ್ಯರನ್ನು ಯಾರೂ ಬರಹೇಳುವುದಿಲ್ಲ, ಆದರೂ ಬರುತ್ತೇವೆ; ಯಾರೂ ಹೋಗೆಂದು ಹೇಳುವುದಿಲ್ಲ, ಆದರೂ ಹೋಗುತ್ತೇವೆ. ಈ ಆಗಮನ-ನಿರ್ಗಮನದ ಅರ್ಥವೇನು– ಇಲ್ಲಿ ಎರಡು ದಿನದ ಬದುಕಿನ ಅರ್ಥವೇನು? ಇದನ್ನೆಲ್ಲಾ ಚಿಂತಿಸಿ ಅಳುವುದೇಕೆ ಭಗಿನಿಯರೇ?' ಆಕೆಯ ಮುಖದಲ್ಲಿ ಶಾಂತಿ ತುಂಬಿದ್ದರೂ ಧ್ವನಿ ಸ್ವಲ್ಪ ನಡುಗುತ್ತಿತ್ತು. ಅಲ್ಲಿದ್ದವರೆಲ್ಲರಿಗೂ ಆಕೆಯ ದುಃಖದ ಜೀವನದ ಬಗ್ಗೆ ತಿಳಿದಿತ್ತು. ಹಾಗಾಗಿ ಆಕೆಯ ಮಾತುಗಳನ್ನು ಕೇಳಲೆಂದು ಎಲ್ಲರೂ ಕಾತರರಾಗಿ ಕುಳಿತಿದ್ದರು– ಆ ಮಹಾಸಾಧ್ವಿಯ ಅಮೃತವಾಣಿ ಎಲ್ಲರಿಗೂ ಪ್ರಿಯ.

## ೨

ಗಹನವಾದ ಕಾಡು. 'ನೀವು ಮೂವರೂ ಇಲ್ಲಿ ಕುಳಿತಿರಿ, ವಿಶ್ರಾಂತಿ ತೆಗೆದುಕೊಳ್ಳಿ. ನಾನು ಸೌದೆಯ ವ್ಯವಸ್ಥೆ ಮಾಡುತ್ತೇನೆ. ಒಳ್ಳೆಯ ಅಡುಗೆ ಮಾಡೋಣ' ಎಂದ ಅವಳ ಪತಿದೇವ. ತನ್ನೆರಡು ಮಕ್ಕಳೊಡನೆ ಆಕೆ ಮರದ ಕೆಳಗೆ ಕುಳಿತಿದ್ದಳು. ಚಿಕ್ಕ ಮಗ ಶಿಶುವಾದ್ದರಿಂದ ನಿದ್ರಿಸುತ್ತಿದ್ದ. ನಾಲ್ಕು ವರ್ಷ ವಯಸ್ಸಿನ ಹಿರಿಯವ ಬಹಳ ವ್ಯಸ್ತನಾಗಿದ್ದ– ಹಕ್ಕಿಗಳ ಅನುಕರಣೆ, ಚಿಟ್ಟೆ ಹಿಡಿಯುವುದು – ಅವನಿಗೆ ಯಾರೋ ಬಹಳ ಕೆಲಸ ಕೊಟ್ಟಂತೆ ಕಾಣುತ್ತಿತ್ತು. ಆಕೆಯ ಹೃದಯದಲ್ಲಿ ಸ್ವಲ್ಪ ಬಿರುಗಾಳಿ ಬೀಸುತ್ತಿದ್ದುದೇನೋ ನಿಜ. ವರ್ಷಗಳ ನಂತರ ತಂದೆಯ ಮನೆಗೆ ಹೋಗುತ್ತಿದ್ದಳು. ತಾಯಿ ತಂದೆಯ ಪ್ರತಿಕ್ರಿಯೆ ಏನಾಗಬಹುದು? ತಂದೆ ತನ್ನ ಪ್ರೀತಿಯ ಒಬ್ಬಳೇ ಮಗಳನ್ನು ಬಯ್ದು ಓಡಿಸುವರೇ? ತಾಯಿ ತನ್ನ ಪ್ರೀತಿಯ ಹುಡುಗಿಯನ್ನು ತ್ಯಾಗ ಮಾಡುವಳೇ? ಇಲ್ಲ, ಈ ಎರಡು ಸುಂದರ ಶಿಶುಗಳನ್ನು ಕಂಡರೆ ಅವರ ಪ್ರಾಣಕ್ಕೆ ಆನಂದವುಂಟಾಗುವುದರಲ್ಲಿ ಸಂದೇಹವಿಲ್ಲ.

ಅವಳ ತಾಯಿತಂದೆಯರು ಐಶ್ವರ್ಯವಂತರು, ನಿಜ. ಆದರೆ ಅವರ ದುಃಖವನ್ನು ನೆನೆಸಿಕೊಂಡರೆ ಆಕೆಯ ಮನದಲ್ಲಿ ಅಶಾಂತಿ. ಅವರ ದುಃಖಕ್ಕೆ ಕಾರಣ ತಾನೇ ಎಂದೂ ಆಕೆಗೆ ಗೊತ್ತು. ಆದರೆ ವಿಧಿಯೇನು? ತಂದೆಯ ಆಸೆ ಮಗಳಿಗೆ ಶ್ರೀಮಂತ ವ್ಯಕ್ತಿಯೊಂದಿಗೆ ಮದುವೆ ಮಾಡಬೇಕೆಂದು. ಆದರೆ ಅವರು ಆರಿಸಿದ ಶ್ರೀಮಂತ ದುರುಳ. ಕುಡಿದೂ ಕುಡಿದೂ ಹಣವನ್ನೆಲ್ಲ ದುರ್ವ್ಯಸನಗಳಲ್ಲಿ ನಷ್ಟ ಮಾಡುವ ಆತನೊಂದಿಗೆ ಈ ಶಾಂತ, ಗಂಭೀರ ಯುವತಿಯ ವಿವಾಹವೇ? ಗೆಳತಿಯರ ಸಲಹೆಯೊಂದಿಗೆ ಈ ಅದ್ಭುತ, ಶಿಷ್ಟ ವ್ಯಕ್ತಿಯೊಂದಿಗೆ ಆಕೆ ಮನೆಯಿಂದ ಹೊರನಡೆದಿದ್ದಳು. ವರುಷಗಳು ಕಳೆದುಹೋಗಿವೆ. ಇನ್ನು ತಾಯಿತಂದೆ ಕೋಪಮಾಡಿಕೊಳ್ಳಲಾರರು. ಇದಕ್ಕೂ ಮಿಗಿಲಾಗಿ ಅವರಿಗೆ ಈಗ ಅರಿವಾಗಿದೆ ಆ ದುರುಳನ ದುಶ್ಚಾರಿತ್ರ್ಯ. ಆತನನ್ನು ಮದುವೆಯಾಗಿದ್ದರೆ ಜೀವನ ಎಷ್ಟು ದುಃಖಮಯವಾಗುತ್ತಿತ್ತು!

‘ ಆಹ್!.......ಆಹ್!.....’ ಬೆಚ್ಚಿದಳು ಆಕೆ. ಇದು ತನ್ನ ಪತಿಯದೇ ಧ್ವನಿ ! ಹುಚ್ಚಿಯಂತೆ ಓಡಿದಳು. ‘ ಏನಾಯಿತು? ಏನಾಯಿತು? ಸ್ವಾಮಿ?’ ಎಂದು ಚೀರುತ್ತಾ ಧ್ವನಿ ಬಂದ ದಿಕ್ಕಿನೆಡೆಗೆ ಓಡಿದಳು. ಅಲ್ಲಿ ಇವಳ ಪತಿ ಮಲಗಿ ಚಡಪಡಿಸುತ್ತಿದ್ದ.




‘ ಏನಾಯಿತು?’ ಎಂದು ಅಳುತ್ತಾ ಕೇಳಿದಳು. ‘ ಹಾವು!......ಕಪ್ಪು ಬಣ್ಣದ ಹಾವು! ನಿನ್ನನ್ನೂ, ಪುಟ್ಟಮಕ್ಕಳನ್ನೂ ಈ ಅಡವಿಯಲ್ಲಿ ಈ ಪರಿಸ್ಥಿತಿಯಲ್ಲಿ ಬಿಟ್ಟುಹೋಗಲು ಬಹಳವೇ ಕಷ್ಟವಾಗುತ್ತಿದೆ. ..........ಆದರೆ.........’ ಆಕೆ ತನ್ನಿಂದ ಸಾಧ್ಯವಾದ ಎಲ್ಲವನ್ನೂ ಮಾಡಲು ಪ್ರಯತ್ನಿಸಿದಳು. ಆದರೇನು? ಅವನ ಅಂತಿಮ ಕ್ಷಣಗಳು ಬಂದವು. ‘ಮಕ್ಕಳನ್ನು ........ಚೆನ್ನಾಗಿ ನೋಡಿಕೋ, ನೀನೂ ಚೆನ್ನಾಗಿರು......’ ಎಂದು ಹೇಳಿ ಅವನು ಹೊರಟುಹೋದ. ಅವಳು ಮೂರ್ಛೆಹೋದಳು. ಚೇತರಿಸಿಕೊಂಡಾಗ ಆಕೆಗೆ ಏನು ಮಾಡ ಬೇಕೆಂಬುದೇ ತಿಳಿಯಲಿಲ್ಲ. ಅಳುತ್ತಾ ಗಿಡದ ಬುಡಕ್ಕೆ ತಲೆ ಹೊಡೆದುಕೊಂಡಳು. ಮಕ್ಕಳಿದ್ದಲ್ಲಿ ಓಡಿಬಂದಳು. ‘ ಮಗೂ, ನೋಡು ಏನಾಗಿದೆ ಎಂದು! ಈ ನಿನ್ನ ಅಸಹಾಯಕಳಾದ ತಾಯಿಯನ್ನು ವಿಧಿ ಹೇಗೆ ಪರೀಕ್ಷಿಸುತ್ತಿದೆ ನೋಡು! ಹಾವು ಕಡಿದು ನಿನ್ನ ತಂದೆ......’ ನಾಲ್ಕು ವರ್ಷದ ಬಾಲಕನಿಗೆ ‘ಹಾವು’ ಚೆನ್ನಾಗಿ ಗೊತ್ತಿತ್ತು. ಭಯದಿಂದ ಅಳತೊಡಗಿದ. ಆಕೆ ಮಕ್ಕಳನ್ನು ಪತಿಯ ಶವವಿದ್ದಲ್ಲಿಗೆ ಕೊಂಡೊಯ್ದಳು. ನಮಸ್ಕರಿಸಿ ಸಾಧ್ಯವಾದಷ್ಟೂ ಆ ಶರೀರವನ್ನು ಬಟ್ಟೆಗಳಿಂದ ಮುಚ್ಚಿದಳು. ತನ್ನ ಮನೆಗೆ ಹೋಗಿ ತಾಯಿತಂದೆಗಳಿಗೆ ನಡೆದ ಘಟನೆಯನ್ನೆಲ್ಲ ಹೇಳಿ ಸಹಾಯ ಪಡೆಯ ಬಹುದೆಂದು ಯೋಚಿಸಿದಳು. ಚಿಕ್ಕವನನ್ನು ಎತ್ತಿಕೊಂಡು ಹಿರಿಯವನನ್ನು ನಡೆಸಿಕೊಂಡು ಮುನ್ನಡೆದಳು. ಸಾಮಾನುಗಳೆಲ್ಲ ಅಲ್ಲಿಯೆ ಉಳಿದವು. ಸ್ವಲ್ಪ ದೂರ ಬಂದಾಗ ಒಂದು ಚಿಕ್ಕ ನದಿ ಎದುರಾಯಿತು. ಸೊಂಟದ ಮಟ್ಟದ ನೀರು! ಅವಳ ಕಷ್ಟಗಳಿಗೆ ಕೊನೆಯೇ ಇದ್ದಂತೆ ಕಾಣಲಿಲ್ಲ. ಈಗ ಏನು ಮಾಡುವುದು? ಇಬ್ಬರು ಮಕ್ಕಳನ್ನು ಒಂದೇ ಸಾರಿ ನದಿ ದಾಟಿಸುವುದು ಅಸಂಭವ. ಯಾರಾದರೂ ಸಹಾಯ ಮಾಡುವವರಿರುವರೇ ಎಂದು ನೋಡಿದಳು. ಒಂದು ಮರದ ಮೇಲೆ ರಣಹದ್ದು ಕುಳಿತಿತ್ತು – ಅದನ್ನು ಬಿಟ್ಟರೆ ಯಾವ ಪ್ರಾಣಿಯೂ ಅಲ್ಲಿರಲಿಲ್ಲ.

ನಿರುಪಾಯಳಾಗಿ ಪುಟ್ಟ ಶಿಶುವನ್ನು ದಡದಲ್ಲಿ ಹಸಿರುಹುಲ್ಲಿನ ಮೇಲೆ ಮಲಗಿಸಿದಳು. ಹಿರಿಯವನನ್ನು ಎತ್ತಿಕೊಂಡು ನದಿಯನ್ನು ಹೇಗೋ ದಾಟಿ ಪಾರಾದಳು. ‘ನೀನು ಇಲ್ಲಿಯೇ ಕುಳಿತಿರು. ನಿನ್ನ ತಮ್ಮನನ್ನು ಕರೆತರುತ್ತೇನೆ’ ಎಂದು ಹಿರಿಯವನಿಗೆ ಹೇಳಿ ಹಿಂತಿರುಗಿ ನೋಡಿದವಳೇ ಹುಚ್ಚಿಯಂತೆ ಚೀರಿದಳು. ಮರದ ಮೇಲಿದ್ದ ರಣಹದ್ದು ಹಾರಿ ಬಂದು ಶಿಶುವನ್ನು ಎತ್ತಿಕೊಂಡು ಹಾರಿತ್ತು. ನದಿಯಲ್ಲಿಳಿದು ಚೀರಾಡಿದಳು. ಕೈ ಬೀಸಿದಳು. ಆದರೆ ಈ ಪರಿಶ್ರಮ ವೆಲ್ಲ ವ್ಯರ್ಥವೇ. ನೀರಿನಲ್ಲಿ ಓಡಲೆತ್ನಿಸಿ ಬಿದ್ದೇ ಬಿಟ್ಟಳು. ಹೇಗೋ ಮೇಲೆದ್ದು ಈ ದಡಕ್ಕೆ ಬಂದು ಹಕ್ಕಿ ಹಾರಿದ ದಿಕ್ಕಿನಲ್ಲಿ ಕೈ ಬೀಸುತ್ತಾ ಓಡಿದಳು. ನೆನೆದು ಒದ್ದೆಯಾಗಿದ್ದ ವಸ್ತ್ರದಲ್ಲಿದ್ದ ಅಬಲೆ ಹೆಂಗಸಿನ ವೇಗವೆಲ್ಲಿ? ಹಕ್ಕಿಯ ವೇಗವೆಲ್ಲಿ? ಇಷ್ಟರಲ್ಲಿ ತಾಯಿ ಕೈ ಬೀಸುವುದನ್ನು ಕಂಡ ಹಿರಿಯ ಹುಡುಗ ತನ್ನನ್ನು ತಾಯಿ ಕರೆಯುತ್ತಿರಬಹುದೆಂದೇ ಭಾವಿಸಿ ನೀರಿಗಿಳಿದ. ಇದನ್ನು ಕಂಡ ತಾಯಿಗೆ ಏನು ಮಾಡುವುದೆಂದೇ ತಿಳಿಯಲಿಲ್ಲ. ‘ತಾಳು! ನಿಲ್ಲು! ಬರಬೇಡ! ನಿಲ್ಲು! ಆಹಾ........’ ನೀರಿನ ಶಬ್ದದಲ್ಲಿ ಅವಳ ದುಃಖದ ದನಿ ಆ ಹುಡುಗನಿಗೆ ಕೇಳಿಸಲೇ ಇಲ್ಲ. ಕೈ ಬೀಸಿ ಬೀಸಿ ತಡೆದರೂ ಆ ಹುಡುಗನಿಗೆ ಅರ್ಥವಾಗಲಿಲ್ಲ. ಅಷ್ಟರಲ್ಲಿ ಒಂದು ದೊಡ್ಡ ಅಲೆ ಬಂದು ಆ ಹುಡುಗನನ್ನು ಕಬಳಿಸಿತು.

ಒಂದೇ ದಿನದಲ್ಲಿ ಎಲ್ಲವೂ ಮುಗಿದುಹೋಯಿತು! ಕೆಲವೇ ಘಂಟೆಗಳ ಅಂತರದಲ್ಲಿ ಪ್ರಾಣಕ್ಕೂ ಪ್ರಿಯರಾದ ಮೂವರು ಕಣ್ಣೆದಿರಿನಲ್ಲೇ ಇಲ್ಲವಾಗಿದ್ದರು. ಅವಳ ದುಃಖ, ನೋವು, ವ್ಯಥೆ ಅರಣ್ಯರೋದನವಲ್ಲದೆ ಮತ್ತೇನು? ಪ್ರಜ್ಞೆ ತಪ್ಪಿತು, ಎಚ್ಚೆತ್ತಳು, ಮತ್ತೊಮ್ಮೆ ಅಳುತ್ತಾ ಅಳುತ್ತಾ ನೆಲದಲ್ಲಿ ಬಿದ್ದಳು. ಹುಚ್ಚಿಯಾಗಿ ಹೋದಳವಳು. ಆ ದುಃಖದಲ್ಲಿಯೂ ಕಡೆಯ ಪ್ರಯತ್ನ ಮಾಡಲೇ ಬೇಕೆಂದು ಯೋಚಿಸಿದಳು. ಒಂದೇ ಒಂದು ಹಾದಿ – ತಾಯ್ತಂದೆಯರು. ಅವರ ಬಳಿಗೆ ಹೋಗಿ ತನ್ನ ದುಃಖವನ್ನೆಲ್ಲ ತೋಡಿಕೊಳ್ಳಬಹುದು. ಪತಿಯ ಸಂಸ್ಕಾರ ಮಾಡಬಹುದು. ಮಕ್ಕಳ ಶರೀರಗಳನ್ನು ಯೋಗ್ಯರೀತಿಯಲ್ಲಿ ಅಗ್ನಿಗೆ ಅರ್ಪಿಸಬಹುದು.ದುಃಖಿಯ ಮನಸ್ಸಿನಲ್ಲಿ ಈ ಚಿಂತೆ ಬಂದ ಕ್ಷಣವೇ ಊರಿನೆಡೆಗೆ ಧಾವಿಸಿದಳು. ಮುಳ್ಳು ಚುಚ್ಚಿದರೆ ಚಿಂತೆಯಿರಲಿಲ್ಲ, ಬಟ್ಟೆ ಹರಿದರೆ ಅತ್ತ ಗಮನವಿರಲಿಲ್ಲ. ಹೇಗೋ ಓಡಿ ಶ್ರಾವಸ್ತಿಯನ್ನು ತಲುಪಿದಳು. ಅಲ್ಲಿ ತನ್ನ ಬಾಲ್ಯದ ರಸ್ತೆಗಳಲ್ಲಿ ಓಡಿದಳು— ಎಲ್ಲರೂ ಬೆರಗಾಗಿ ನೋಡಿದರೂ ಚಿಂತೆಯಿಲ್ಲ. ಆದರೆ ಇದೇನು? ತನ್ನ ಮನೆಯೆದುರು, ತನ್ನ ಬಾಲ್ಯದ ಸುಂದರ ಗೃಹದೆದುರು ಇಷ್ಟೊಂದು ಜನಸಂದಣಿ? ರಸ್ತೆಯಲ್ಲಿ ನಡೆಯಲೂ ಜಾಗವಿರಲಿಲ್ಲ. ಅಷ್ಟು ಜನಸಂದಣಿ. ಜನರನ್ನು ತಳ್ಳುತ್ತಾ ಹೇಗೋ ಮಾಡಿ ಮುನ್ನುಗ್ಗಿದಳು. ಜನರೆಲ್ಲರಿಗೂ ಆಕೆ ಯಾರೆಂದು ತಿಳಿದಿತ್ತು. ಆದರೆ ಈ ಹುಚ್ಚಿಯ ವೇಷದಿಂದಲ್ಲ. ಆಕೆಯನ್ನು ಹಿಂದೆ ನೋಡಿದ್ದವರೆಲ್ಲರಿಗೂ ಆಕೆಯೊಬ್ಬಳು ಲಜ್ಜೆ ತುಂಬಿದ, ನಾಚಿಕೆಯ ಸ್ವಭಾವದ ಪುಟ್ಟ ಬಾಲೆ. ಹಾಗಾಗಿ ಇಂದು ಅವಳ ಈ ವಿಚಿತ್ರ ವೇಷ ಕಂಡು ಯಾರೂ ತಡೆಯಲಿಲ್ಲ. ಅವರೆಲ್ಲ ಭಾವಿಸಿದರು

'ಬಹುಶಃ ಈಕೆಗೆ ಸುದ್ದಿ ತಿಳಿದಿದೆ' ಎಂದು. ಕೆಂಪಾಗಿದ್ದ ಕಂಗಳು, ಒದ್ದೆಯಾಗಿ ಕೆದರಿದ್ದ ಕೂದಲು, ನೆನೆದು ನಡುಗುತ್ತಿದ್ದ ಶರೀರ–ಭಯ ತರುವಂತಹುದು. 'ಏನಾಯಿತು?' ಆಕೆ ಜೋರಾಗಿ ಕೇಳಿದಳು. ಒಮ್ಮೆಲೇ ಮೂರ್‍ನಾಲ್ಕು ಮಂದಿ ಹೇಳಿದರು : 'ನೆನ್ನೆ ರಾತ್ರಿ ನಿಮ್ಮ ಮನೆಗೆ ಬೆಂಕಿ ಬಿದ್ದಿತು, ಮರದ ಭವನ ಬಹು ಬೇಗ ಉರಿದು ಹೋಯಿತು. ಆದರೆ ವೃದ್ಧರಾದ ನಿಮ್ಮ ತಾಯ್ತಂದೆಗಳನ್ನು.... ರಕ್ಷಿಸಲಾಗಲಿಲ್ಲ.'


ಆಕೆ ವಿಚಿತ್ರವಾಗಿ ನಕ್ಕಳು. 'ಸತ್ತುಹೋದರೇ?' ಶಾಂತಳಾಗಿ ಕೇಳಿದಳು. ಹೌದೆಂದರೊಬ್ಬರು. 'ಸತ್ತೇಹೋದರೇ?' ಮತ್ತೊಮ್ಮೆ ಕೇಳಿದಳು. ಎಲ್ಲರನ್ನು ಮತ್ತೆ ಮತ್ತೆ ಪ್ರಶ್ನಿಸಿದಳು, 'ಹೌದೇ? ಸತ್ತೇ ಹೋದರೇ?' ಜೋರಾಗಿ ನಗತೊಡಗಿದಳು. ಯಾರೋ ದುಃಖದಿಂದ ಉದ್ಗರಿಸಿದರು, 'ಆಹಾ, ಆಕೆಗೆ ಹುಚ್ಚು ಹಿಡಿದಿದೆ!'

ಅವಳ ಪರಿಸ್ಥಿತಿ ನೋಡಿ ಅಕ್ಕ ಪಕ್ಕದ ಮನೆಯವರೆಲ್ಲ ಕಂಬನಿ ಗರೆದರು. ಆಕೆಯ ಉದ್ಗಾರಗಳಿಂದಲೇ ಅವಳ ದುಃಖದ ಕತೆ ಎಲ್ಲರಿಗೂ ತಿಳಿಯಿತು. ಜನರು ಕಾಡಿಗೆ ಹೋಗಿ ಅವಳ ಪತಿಯ ಸಂಸ್ಕಾರ ಮಾಡಿ ಬಂದರು. ಮಕ್ಕಳ ಶವಗಳು ಸಿಗಲಿಲ್ಲ.

ಇತ್ತ ಆಕೆ ರಸ್ತೆ ರಸ್ತೆಯಲ್ಲಿ ಹಾಡುತ್ತಾ ತಿರುಗತೊಡಗಿದಳು. 'ಹಾವೊಬ್ಬರನ್ನು ಕೊಂದಿತು, ಹಕ್ಕಿಯೊಬ್ಬನನ್ನು ಕೊಂದಿತು, ನೀರೊಬ್ಬನನ್ನು ಕೊಂದಿತು... ಬೆಂಕಿ ಇಬ್ಬರನ್ನು ಕೊಂದಿತು' ಯಾರಾದರೂ ಜೋರು ಮಾಡಿ ತಿನ್ನಿಸಿದರೆ ಎರಡು ತುತ್ತು ತಿನ್ನುತ್ತಿದ್ದಳು. ಇಲ್ಲವಾದರೆ ರಸ್ತೆಯಲ್ಲಿಯೇ ಓಡಾಡುತ್ತಿದ್ದಳು. ದಿನಗಳುರುಳಿದವು. ದುಃಖಿಯ ಜೀವನ ಹಾಗೆಯೇ ಸಾಗಿತ್ತು. ಎಲ್ಲಿ ಸಿಕ್ಕರೆ ಅಲ್ಲಿ ತಲೆ ಚಚ್ಚಿಕೊಳ್ಳುವುದು, ಅಳುವುದು ಸಾಧಾರಣ ನಿಯಮವಾಯಿತು. ಸಾಂತ್ವನ ನೀಡುವವರು ಯಾರೂ ಇದ್ದಂತೆ ತೋರಲಿಲ್ಲ.

ಆದರೆ ಒಂದು ದಿನ...! ಅಳುತ್ತಾ ಅಳುತ್ತಾ ಆಕೆ ಒಂದು ಉದ್ಯಾನಕ್ಕೆ ಬಂದಳು. ಅಲ್ಲಿ ಉಪನ್ಯಾಸ ನಡೆದಿತ್ತು. ಉಪನ್ಯಾಸಕರು ತಮ್ಮ ಉಪನ್ಯಾಸ ನಿಲ್ಲಿಸಿ ಈಕೆಯತ್ತ ನೋಡಿದಾಗ ನೆರೆದಿದ್ದ ಜನರೂ ತಿರುಗಿ ನೋಡಿದರು. ಆಶ್ಚರ್ಯ! ಉಪನ್ಯಾಸಕರು ಎದ್ದು ಆಕೆಯತ್ತ ನಿಧಾನವಾಗಿ ನಡೆದಿದ್ದಾರೆ ! 'ಆಕೆಯತ್ತ ಹೋಗಬೇಡಿ... ಆಕೆ ಹುಚ್ಚಿ....' ಎಂದು ಯಾರೋ ಹೇಳಿದಂತಾಯಿತು. ಆದರೆ ಉಪನ್ಯಾಸಕರು ನಿಲ್ಲಲಿಲ್ಲ.

'ಪಟಾಚಾರಾ! ಓ ಪಟಾಚಾರಾ!' ಮರುಕ ತುಂಬಿದ ಕರುಣಾಪೂರ್ಣವಾದ ದನಿ. ಆಕೆ ತಲೆಯೆತ್ತಿ ಆ ದಿವ್ಯಚಕ್ಷುಗಳ ಕಡೆಗೆ ದಿಟ್ಟಿಸಿ ನೋಡಿದಳು. ಶಾಂತಿಯ ಸ್ರೋತವಿತ್ತು ಆ ಕಂಗಳಲ್ಲಿ. ಆಕೆ ಉಪನ್ಯಾಸಕರ ಚರಣಗಳಿಗೆ ವಂದಿಸಿದಳು. ಧಾರೆ ಧಾರೆಯಾಗಿ ಕಣ್ಣೀರು ಹರಿಯಿತು. ಬಹಳ ಹೊತ್ತಿನ ನಂತರ ಶಾಂತನಾಗಿ ಭಗವಾನ್ ಬುದ್ಧ ಆಕೆಗೆ ಹೇಳಿದ, 'ಓ ಪಟಾಚಾರಾ! ನನಗೆ ಎಲ್ಲವೂ ತಿಳಿದಿದೆ. ನಿನ್ನ ವೇದನೆಯ ಕತೆ ನನಗೆ ಗೊತ್ತು. ಇನ್ನು ಶಾಂತಳಾಗು!' ಯಾವುದೋ ಅಜ್ಞಾತ ಮಹಾಶಕ್ತಿಯ ಪ್ರಭಾವದಿಂದಲೋ ಎಂಬಂತೆ ತಟ್ಟನೆ ಪಟಾಚಾರಾ ಶಾಂತಳಾಗಿ ಹೋದಳು. ತಿಂಗಳುಗಳ ದುಃಖ ಹೃದಯದಿಂದ ಮಾಯವಾಗಿತ್ತು! ಮನಸ್ಸಿನ ಅಶಾಂತಿ, ಅಸ್ಪಷ್ಟ ನಡವಳಿಕೆ —ಎಲ್ಲವೂ ಮಾಯವಾಗಿತ್ತು. ಪಟಾಚಾರಾ ಆ ಕ್ಷಣ ನೂತನಳಾಗಿದ್ದಳು. ತನ್ನೆಡೆಗೆ ನೋಡಿಕೊಂಡಳು. ಆಹಾ! ಎಂತಹ ವೇಷ. ಅತ್ಯಂತ ಲಜ್ಜೆಯಿಂದ ಹತ್ತಿರದಲ್ಲಿಯೇ ನಿಂತಿದ್ದ ಯಾರನ್ನೋ ಒಂದು ವಸ್ತ್ರ ನೀಡುವಂತೆ, ಮಾನರಕ್ಷಿಸುವಂತೆ ಬೇಡಿದಳು. ಭಗವಾನ್ ಬುದ್ಧ ನುಡಿದ, 'ಓ ಪಟಾಚಾರಾ! ನೀನು ಇಂದಿನಿಂದ ಕಾಷಾಯ ವಸ್ತ್ರ ಧರಿಸು. ನಿನ್ನ ದುಃಖ ನೋವು ಅಪರಿಮಿತವಾಗಿತ್ತು. ಜೀವನದಲ್ಲಿ ಅಸಾಧ್ಯವಾದ ದುಃಖ ಸಹಿಸಿದೆ. ಈ ಜಗತ್ತು ಎಷ್ಟು ನಶ್ವರ ಎಂಬುದನ್ನು ಚೆನ್ನಾಗಿ ತಿಳಿದೆ. ಇನ್ನು ಸಿದ್ಧಳಾಗು ಪಟಾಚಾರಾ! ಧರ್ಮಕ್ಕೆ, ಸಂಘಕ್ಕೆ ಮತ್ತು ಬುದ್ಧನಿಗೆ ಶರಣಾಗು!'



೩

ಆಕೆ ಅದೆಷ್ಟು ಹೊತ್ತು ಉಪನ್ಯಾಸ ನೀಡಿದಳೋ ತಿಳಿಯದು. ಅವರು ಅದೆಷ್ಟು ಹೊತ್ತು ಕಂಬನಿ ಸುರಿಸುತ್ತಾ ಆಕೆಯ ಉಪನ್ಯಾಸವನ್ನು ಕೇಳಿದರೋ ತಿಳಿಯದು. ಸುಮಾರು ಐನೂರು ಮಂದಿಯ ಹೃದಯದಲ್ಲಿ ಅಂದು ಅದ್ಭುತವಾದ ಆವೇಗ. ಅವರ್ಣನೀಯ ದುಃಖ.

ಮುಗಿಯಿತು. ಆಕೆ ಮೆಲ್ಲನೆ ಸಭೆಗೆ ತಲೆ ಬಾಗಿದಳು. ಆಕೆ ಶಾಂತಳಾಗಿಯೇ ಇದ್ದಳು. ನಿಧಾನವಾಗಿ ಮುಕ್ತಾಯದ ಎರಡು ಮಾತುಗಳನ್ನು ನುಡಿದಳು: 'ಭಗಿನಿಯರೇ, ನನಗಿಂದು ದುಃಖವಿಲ್ಲ. ಆ ದಿನಗಳೆಲ್ಲ ನನ್ನ ಜೀವನದಲ್ಲಿ ಸ್ವಪ್ನದಂತೆ ನಡೆದುಹೋಗಿವೆ. ಇಂದು ನಾನು ಅದನ್ನೆಲ್ಲ ನೆನೆದು ಅಳುವುದಿಲ್ಲ. ಯಾರಿಗಾಗಿ ಅಳಬೇಕು, ಭಗಿನಿಯರೇ? ಯಾವುದೋ ಅವ್ಯಕ್ತ ಕರ್ಮಫಲದಿಂದಾಗಿ ಅವರೆಲ್ಲ ಬಂದರು, ಯಾವುದೊ ಅವ್ಯಕ್ತ ಕರ್ಮಫಲದಿಂದಾಗಿ ಹೋದರು. ಯಾರಿಗಾಗಿ ಅಳಬೇಕು, ಭಗಿನಿಯರೇ?' ಪಟಾಚಾರಾ ನಮ್ರಳಾಗಿ ಸಭೆಗೆ ಮತ್ತೊಮ್ಮೆ ನಮಿಸಿ ಮೆಲ್ಲನೆ ಎದ್ದು ನಡೆದಳು.

**ಈಕೆಯೇ ಥೆರಿ ಪಟಾಚಾರಾ — ಭಗವಾನ್ ಬುದ್ಧದೇವನ ಶಿಷ್ಯೆಯರಲ್ಲಿ ಅಗ್ರಣಿಯಾದ ಮಹಾನ್ ವ್ಯಕ್ತಿತ್ವ!**